ಅನುಬಂಧ

ಜಮಖಂಡಿ ತಾಲೂಕಿನ ಆರೋಗ್ಯ ಸಂಸ್ಥೆಗಳಿಗೆ ಸನ್ 2005-06ನೇ ಸಾಲಿನಲ್ಲಿ ವಿತರಿಸುವ ಔಷಧಿಗಳ ಮೊತ್ತದ ವಿವರ.

ಸಂಸ್ಥೆಯ ಹೆಸರು	ಶೇಕಡಾ 60ರ ಅನುದಾನ	ನೆರೆ ಪೀಡಿತ ಪ್ರದೇಶಕ್ಕೆ
ಜಿಲ್ಲೆ: ಬಾಗಲಕೋಟೆ		
1) ಲಿಂಗನೂರ	8146	30460
2) ಸಾವಳಗಿ	8946	33212
3) ಕೊಣ್ಣೂರ	13704	31349
4) ಚಿಮ್ಮಡ	8641	29361
5) ಸೇರದಾಳ	102.19	33316
6) ಹಿಪ್ಪರಗಿ	9114	22410
7) ಗೋಠೆ	8922	21310
8) ರಬಕವಿ	25303	51790

578 (894) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ಜಿಲ್ಲೆ ಮದ್ದೂರಿನಲ್ಲಿನ ಇ.ಎಸ್.ಐ. ಆಸ್ಪತ್ರೆಯನ್ನು ಮುಚ್ಚುವ ಅಥವಾ ಸ್ಥಳಾಂತರಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಆ) ಈ ಆಸ್ಪತ್ರೆಯನ್ನು ಮುಚ್ಚುವುದರಿಂದ ಸ್ಥಳೀಯ ಕಾರ್ಮಿಕರಿಗೆ ಆಗುವ ತೊಂದರೆಗಳನ್ನು ಸರ್ಕಾರ ಅಧ್ಯಯನ ಮಾಡಿದೆಯೇ;

ಇ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು) :

ಅ) ಹೌದು.

ಆ) ಹೌದು.

ಇ) ಕಾರಾವಿ ನಿಗಮದ ಮಾರ್ಗಸೂಚಿಯ ಅನುಸಾರ 3000ಕ್ಕಿಂತ ಕಡಿಮೆ ವಿಮಾದಾರರನ್ನು ಹೊಂದಿರುವ ಕಾರಾವಿ ಚಿಕಿತ್ಸಾಲಯಗಳನ್ನು ಪುನರ್ ಸಂಘಟಿಸಲಾಗಿರುತ್ತದೆ. ಅದರಂತೆ ಕಾರಾವಿ ಚಿಕಿತ್ಸಾಲಯ, ಮದ್ದೂರಿಗೆ 1000ಕ್ಕಿಂತ ಕಡಿಮೆ ವಿಮಾದಾರರನ್ನು ಅನುಬಂಧಿಸಿರುವುದರಿಂದ ಈ ಚಿಕಿತ್ಸಾಲಯವನ್ನು ಮುಚ್ಚಿ ಅಲ್ಲಿನ ವಿಮಾದಾರರಿಗೆ ಮದ್ದೂರಿನಲ್ಲಿಯೇ ಐ.ಎಂ.ಪಿ. ಪದ್ಧತಿಯನ್ನು ಅನುಷ್ಠಾನಗೊಳಿಸುವುದರ ಮುಖಾಂತರ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಲು ಉದ್ದೇಶಿಸಲಾಗಿದೆ. ಮದ್ದೂರಿನಲ್ಲಿ ಐ.ಎಂ.ಪಿ. ಪದ್ಧತಿಯನ್ನು ಅನುಷ್ಠಾನಗೊಳಿಸಿದ ನಂತರ ಚಿಕಿತ್ಸಾಲಯವನ್ನು ಮುಚ್ಚುವುದರಿಂದ ವಿಮಾದಾರರಿಗೆ ಅನಾನುಕೂಲ ಉಂಟಾಗುವುದಿಲ್ಲ.